ಮಧ್ಯಕಾಲೀನ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಹಿಂದಕ್ಕೆ ಕರೆಯಿಸಿ **ದಿನಾಂಕಃ 20.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಹೆಚ್.ಪಿ.ಎಮ್ ಅವರಿಂದ –

1. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ವಾದಿ ಹಾಗೂ ನಾನು ಸುಮಾರು 10 ವರ್ಷಗಳಿಂದ ಸ್ನೇಹಿತರು ಎಂದರೆ ಸರಿ. ಮೈಸೂರು ಹಿನಕಲ್ ನಲ್ಲಿ ನಮಗೆ ಒಂದು ಅಂಗಡಿ ಇತ್ತು ಎಂದರೆ ಮುಂಚೆ ಇತ್ತು, ಈಗ ಇಲ್ಲ. ವಾದಿ ನಮ್ಮ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಾ ನಮಗೆ ಪರಿಚಯವಾಗಿದ್ದಾರೆ ಎಂದರೆ ಸರಿ. ಈ ರೀತಿ ನನಗೆ ಪರಿಚಯವಾಗುತ್ತಾ ನನಗೆ ಹುಣಸೂರು ತಾಲೂಕಿನಲ್ಲಿ ಜಮೀನುಗಳಿವೆ ಎಂದು ವಾದಿಯೊಂದಿಗೆ ಹೇಳಿಕೊಂಡಿದ್ದೆ ಎಂದರೆ ಸರಿಯಲ್ಲ.

2. ನನ್ನ ಮಗನಿಗೆ ಕೆಲಸ ಹುಡುಕುತ್ತಿದ್ದೇನೆ ಅದರ ಸಲುವಾಗಿ ಹುಣಸೂರು ತಾಲೂಕಿನ ಕಲ್ಕುಣಿಕೆ ಗ್ರಾಮದ ಸರ್ವೇ ನಂ.24/1 ಬಿ ರಲ್ಲಿ 1 ಎಕರೆ 9 ಗುಂಟೆ ಜಾಗ ಇದ್ದು ಅದನ್ನು ಮಾರಾಟ ಮಾಡಲು ಇಚ್ಚಿಸಿದ್ದೇನೆ ಎಂದು ವಾದಿಯೊಂದಿಗೆ ಹೇಳಿಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಜಮೀನು ನಿವೇಶನಗಳನ್ನಾಗಿ ಪರಿವರ್ತಿಸಲು ಯೋಗ್ಯವಾಗಿದೆ ಅದು ಕಲ್ಕುಣಿಕೆ-ಕಟ್ಟೆಮಳಲವಾಡಿಗೆ ಲಗತ್ತಾಗಿದೆ ಎಂದು ಕೂಡ ವಾದಿಯೊಂದಿಗೆ ಹೇಳಿಕೊಂಡಿದ್ದೆ ಎಂದರೆ ಸರಿಯಲ್ಲ. ವಾದಿಯನ್ನು ಕರೆದುಕೊಂಡು ಬಂದು ಸದರಿ ಜಾಗವನ್ನು ಸಹ ತೋರಿಸಿದ್ದೆ ಎಂದರೆ ಸುಳ್ಳು. ಸದರಿ ಸರ್ವೇ ನಂಬರಿನ ಜಾಗದ ಪೈಕಿ 40x60 ಅಳತೆಯ ನಿವೇಶನ ಉಳ್ಳ ದಾವ ಸ್ವತ್ತನ್ನು ನಾನು ಬರೆದುಕೊಡುತ್ತೇನೆ ಎಂದು ವಾದಿಗೆ ಮಾತುಕೊಟ್ಟಿದ್ದೆ ಎಂದರೆ ಸುಳ್ಳು. ಆ ಸಂದರ್ಭದಲ್ಲಿ ವಾದಿ ದಾವ ಸ್ವತ್ತಿನ ಕ್ರಯವನ್ನು ರೂ.5 ಲಕ್ಷಗಳಿಗೆ ನಿಗದಿ ಪಡಿಸಿ ಅದರ ಪೈಕಿ ರೂ3,25,000/- ಗಳನ್ನು ವಾದಿಯಿಂದ ಸಾಕ್ಷಿಗಳ ಸಮಕ್ಷಮ ಪಡೆದು ಅದನ್ನು ಮೈಸೂರಿನ ನೋಟರಿ ಕಚೇರಿಯಲ್ಲಿ ಕ್ರಯದ ಕರಾರು ಬರೆದುಕೊಟ್ಟಿದ್ದೆ ಎಂದರೆ ಸುಳ್ಳು.

ಈ ರೀತಿ ವಾದಿಯಿಂದ ನಾನು ನೋಟರಿ ಹಾಗೂ ಸಾಕ್ಷಿದಾರರ ಸಮಕ್ಷಮ ನಾನು ವಾದಿಗೆ ಹಣ ಸಂದಾಯದ ರಶೀದಿ ಕೂಡ ಬರೆದುಕೊಟ್ಟಿದ್ದೆ ಎಂದರೆ ಸುಳ್ಳು.

3. ಸದರಿ ಸರ್ವೇ ನಂಬರ್ ಜಾಗವನ್ನು ಭೂ ಪರಿವರ್ತನೆ ಮಾಡಿದ 3 ತಿಂಗಳ ಒಳಗಾಗಿ ನಿಮಗೆ ಕ್ರಯಪತ್ರವನ್ನು ಬರೆದುಕೊಡುತ್ತೇನೆ ಎಂದು ನಾನು ವಾದಿಗೆ ತಿಳಿಸಿದ್ದೆ ಎಂದರೆ ಸುಳ್ಳು. ಅದೇ ರೀತಿ ಇನ್ನೂ ಉಳಿಕೆ ರೂ.1,75,000/- ಗಳನ್ನು ಸಬ್ ರಿಜಿಸ್ಟ್ರಾರ್ ಸಮಕ್ಷಮ ಪಡೆದುಕೊಂಡು ವಾದಿ ಖರ್ಚಿನಲ್ಲಿ ದಾವ ಸ್ವತ್ತನ್ನು ಕ್ರಯಪತ್ರವನ್ನು ಬರೆದುಕೊಡುತ್ತೇನೆ ಎಂದು ಹೇಳಿದ್ದೆ ಎಂದರೆ ಸುಳ್ಳು. ಅದೇ ರೀತಿ ದಾವ ಸ್ವತ್ತಿಗೆ ಸಂಬಂಧಪಟ್ಟ MR, EC, RTC, ಆಕಾರ ಬಂದ್, ಟಿಪ್ಪಣಿ ಪ್ರತಿ, ಗ್ರಾಮ ನಕಾಶೆ, ಅಸಲು ಮಂಜೂರಾರಿತಿ ಪತ್ರ, ನಮ್ಮ ಪೂರ್ವಿಕರಿಗೆ ಮಂಜೂರಾದ ಮಂಜೂರು ಪತ್ರ, ನಮ್ಮ ವಂಶವೃಕ್ಷ ಗಳ ಅಸಲು ದಾಖಲಾತಿಗಳನ್ನು 90 ದಿನಗಳ ಒಳಗಾಗಿ ನೀಡಿ ಕ್ರಯಪತ್ರ ಬರೆದುಕೊಡುತ್ತೇನೆ ಎಂದು ಹೇಳಿದ್ದೆ ಎಂದರೆ ಸುಳ್ಳು.

**4.** ದಿಃ **12.12.2014** ರಲ್ಲಿ ಅಂದರೆ **3** ತಿಂಗಳ ನಂತರ ಭೂ ಪರಿವರ್ತನೆಗಾಗಿ ಹಣದ ಅವಶ್ಯಕತೆ ಇದೆ ಎಂದು ನಾನು ವಾದಿಗೆ ಕೋರಿದ್ದರ ಮೇರೆಗೆ ಅವರು ನನಗೆ ಕಾವೇರಿ ಗ್ರಾಮೀಣ ಬ್ಯಾಂಕ್ ಚೆಕ್ 524235 ನಂಬರಿನ ದಿಃ 12.12.2014 ಅನ್ನು ನಮೂದು ಮಾಡಿ ರೂ.1,20,000/- ಗಳಿಗೆ ಬೇರರ್ ಚೆಕ್ ನೀಡಿದ್ದರು ಎಂದರೆ ಸಾಕ್ಷಿ ನನ್ನ 100 ಗ್ರಾಂ ಚಿನ್ನವನ್ನು ಅಡ ಇಟ್ಟುಕೊಂಡು PHYSICAL TEST ಗಾಗಿ ರೂ.80,000/- ಪಡೆದುಕೊಂಡಿದ್ದೇನೆ ಉಳಿಕೆ ರೂ.40,000/-ಗಳನ್ನು ಕೊಟ್ಟಿದ್ದರು ಎಂದು ನುಡಿಯುತ್ತಾರೆ.

**5.** ನನ್ನ ಬಳಿ ಒಡವೆಗಳನ್ನು ಅಡ ಇಟ್ಟಿದ್ದಕ್ಕೆ ದಾಖಲಾತಿಗಳು ಇವೆ, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಒಡವೆಗೆ ಸಂಬಂಧಪಟ್ಟ ಹಣ ಎಂದು ಸದರಿ ದಾಖಲಾತಿಗಳಲ್ಲಿ ನಮೂದು ಇದೆ. ಸದರಿ ದಾಖಲಾತಿಗಳನ್ನು ಇಂದು ತಂದಿದ್ದೇನೆ, ಅವುಗಳನ್ನು ಇನ್ನೂ ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನಾನು ಹೇಳುತ್ತಿರುವ ಈ ಎಲ್ಲ

ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ, ನನ್ನ ಮಗನಿಗೆ ಕೆಲಸ ಕೊಡಿಸುತ್ತೇನೆ ಎಂದು ಹಣ ಪಡೆದುಕೊಂಡಿದ್ದರು ಎಂದು ನುಡಿಯುತ್ತಾರೆ.

6. ನಾನು ವಾದಿಯಿಂದ ರೂ.1,20,000/-ಗಳನ್ನು ಪಡೆದುಕೊಂಡಿದ್ದ ಬಗ್ಗೆ ನಾನು ನೋಟರಿ ಹಾಗೂ ಸಾಕ್ಷಿದಾರರ ಸಮಕ್ಷಮ ವಾದಿಗೆ ಹಣ ಸಂದಾಯದ ರಶೀದಿ ಕೂಡ ಬರೆದುಕೊಟ್ಟಿದ್ದೆ ಎಂದರೆ ಸುಳ್ಳು. ಉಳಿಕೆ ರೂ.55,000/- ಗಳನ್ನು ಪಡೆದು ನಾನು ನಿಮಗೆ ಸ್ವತ್ತನ್ನು ರಿಜಿಸ್ಟರ್ ಮಾಡಿಸಿಕೊಡುತ್ತೇನೆ ಎಂದು ವಾದಿಗೆ ಹೇಳಿದ್ದೆ ಎಂದರೆ ಸುಳ್ಳು.

7. ದಿಃ 02.05.2015 ರಂದು ರೂ.25,000/-ಗಳನ್ನು ನಾನು ಸಾಕ್ಷಿದಾರರ ಸಮಕ್ಷಮ ಪಡೆದು ಅದಕ್ಕೂ ಸಹ ಹಣ ಸಂದರ ರಶೀದಿ ಬರೆದುಕೊಟ್ಟು, ಭೂ ಪರಿವರ್ತನೆ ಆದ ತಕ್ಷಣ ನಿಮ್ಮಿಂದ ರೂ.30,000/-ಗಳನ್ನು ಪಡೆದುಕೊಂಡು ಕ್ರಯಪತ್ರ ಬರೆದುಕೊಡುತ್ತೇನೆ ಅಶ್ವಾಸನೆ ನೀಡಿದ್ದೆ ಎಂದರೆ ಸುಳ್ಳು.

**ಮುಂದುವರಿದ ಮುಖ್ಯವಿಚಾರಣೆಃ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.